| | ಗ್ರಾಮಸ್ಥರು ಗೀಜಗಾರು ಗ್ರಾಮ | ಗ್ರಾಮದಲ್ಲಿ ವೋಲ್ಟೇಜ್ ಸಮಸ್ಯೆ ಇರುವ ಬಗ್ಗೆ. | ಆವಿನಹಳ್ಳಿ | ಇಲಾಖಾ ನಿಯಮಾನುಸಾರ ಹೆಚ್ಚುವರಿ ಪರಿವರ್ತಕ ಅಳವಡಿಸುವ ಮತ್ತು ಎಲ್.ಟಿ ವಾಹಕ ಬದಲಾವಣೆ ಮಾಡಲು ಅಂದಾಜು ಪಟ್ಟಿ ತಯಾರಿಸಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಿಸಿದ ಶಾಖಾಧಿಕಾರಿಗಳಿಗೆ ಸೂಚಿಸಲಾಗಿದೆ. |
| | ಶ್ರೀ ಷಣ್ಮುಖಪ್ಪ ಬಿನ್ ಗಾಮಪ್ಪ ಕುಂದೂರು ಗ್ರಾಮ | ಇವರ ನೀರಾವರಿ ಸ್ಥಾವರಕ್ಕೆ ಮೂಲಭೂತ ಸಂಪರ್ಕ ಕಲ್ಪಿಸುವ ಬಗ್ಗೆ. | ತ್ಯಾಗರ್ತಿ | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾ ಮತ್ತು ಪಾ ವಿಭಾಗ ಮೆಸ್ಕಾಂ ಸಾಗರ ರವರಿಗೆ ಸೂಕ್ತ ಕ್ರಮ ಕೈಗೊಳ್ಳಲು. ನಿರ್ದೇಶಿಸಿರುತ್ತಾರೆ. |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)(ಪ್ರ),
ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪವಿಭಾಗ,
ಮೆಸ್ಕಾಂ, ಸಾಗರ.

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನೋಂದಾಯಿತ ಕಛೇರಿ: ಮೆಸ್ಕಾಂ ಭವನ, ಕಾವೂರು ಅಡ್ಡ ರಸ್ತೆ, ಬಿಜೈ, ಮಂಗಳೂರು-575 004.
Corporate Identity Number:[CIN] U40109 KA 2002 SGC 030425, ವೆಬ್ ವಿಳಾಸ: WWW.mesco.in
ಮೆಸ್ಕಾಂ
MESCOM
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಕಛೇರಿ
ಕಾರ್ಯ ಮತ್ತು ಪಾಲನೆ ಉಪವಿಭಾಗ,
ಹೊಸನಗರ-577 418
ದೂರವಾಣಿ : 08185-221559
ಇ-ಮೇಲ್ : aeehnr@rediffmail.com

2492
16-9-23

ಕ್ರಮಾಂಕ : ಸಕಾನಿಇಂ(ವಿ)/ಸಇಂ(ತಾಂ)/ಹೊನ/ 3735-41 ದಿನಾಂಕ : 8-9-23

ದಿನಾಂಕ:06.09.2023 ಬುಧವಾರ ಬೆಳಿಗ್ಗೆ 11-00 ಕ್ಕೆ ಹೊಸನಗರ ಉಪವಿಭಾಗೀಯ ಕಛೇರಿಯಲ್ಲಿ ನಡೆದ ಜನ ಸಂಪರ್ಕ ಸಭೆಯ ಸಭಾ ನಡಾವಳಿಗಳು.

***

ಅಧ್ಯಕ್ಷತೆ :ಶ್ರೀ ಕೃಷ್ಣಮೂರ್ತಿ.ಕೆ.ಎಸ್,
ಅಧೀಕ್ಷಕ ಇಂಜಿನೀಯರ್(ವಿ)(ಪ್ರಭಾರ),ಶಿವಮೊಗ್ಗ

ಇವರು ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿ/ನೌಕರರನ್ನು ಹಾಗೂ ಗ್ರಾಹಕರನ್ನು ಸ್ವಾಗತಿಸಿದ ನಂತರ ಸಭೆಯ ಉದ್ದೇಶವನ್ನು ವಿವರಿಸಿದರು.

ಹಾಜರಿದ್ದ ಅಧಿಕಾರಿಗಳು:

1. ಶ್ರೀ ಕೃಷ್ಣಮೂರ್ತಿ.ಕೆ.ಎಸ್ — ಅಧೀಕ್ಷಕ ಇಂಜಿನೀಯರ್(ವಿ)(ಪ್ರಭಾರ)
2. ಶ್ರೀ ಚಂದ್ರಶೇಖರ. — ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಹೊಸನಗರ
3. ಶ್ರೀ ಮಾಯಣ್ಣ ಗೌಡ.ಎ.ಹೆಚ್ — ಸಹಾಯಕ ಇಂಜಿನೀಯರ್(ವಿ) (ತಾಂ)ಪ್ರಭಾರ ಹೊಸನಗರ
4. ಶ್ರೀ ಗೋಪಾಲ.ಆರ್. — ಕಿರಿಯ ಇಂಜಿನೀಯರ್(ವಿ)ಉವಿವಿಕೇಂದ್ರ, ಹೊಸನಗರ
5. ಶ್ರೀ ರಾಘವೇಂದ್ರ.ಎಸ್.ಸಿ. — ಸಹಾಯಕ ಲೆಕ್ಕಾಧಿಕಾರಿ(ಪ್ರಭಾರ)

**ಜನ ಸಂಪರ್ಕ ಸಭೆಗೆ ಆಗಮಿಸಿದ ಗ್ರಾಹಕರು ಮತ್ತು ದೂರಿನ ವಿವರ ಹಾಗೂ ಕೈಗೊಂಡ ಕ್ರಮ.**

| ಕ್ರ.ಸಂ | ಜನ ಸಂಪರ್ಕ ಸಭೆಗೆ ಆಗಮಿಸಿದ ಗ್ರಾಹಕರು | ದೂರಿನ ವಿವರ | ದೂರಿಗೆ ಸಂಬಂಧಿಸಿ ಶಾಖೆ | ತೆಗೆದುಕೊಂಡ ಕ್ರಮ |
|---|---|---|---|---|
| 1 | ಏರಿಗೆ ಉಮೇಶ, ಮಹಾಬಲ ರಾವ್, ಸುನಿಲ್ | ಹೆಚ್ಚುವರಿ 2 ಎಂಎಂಡಿ ಮತ್ತು ಗೃಹಜ್ಯೋತಿ ವಿಚಾರಣೆ | ಹೊಸನಗರ | ಸ್ಥಳದಲ್ಲಿಯೇ ಬಗೆಹರಿಸಲಾಯಿತು. |
| 2 | ಮಂಜುನಾಥ, ಮಲ್ಲಿಕ ಗೌಡ, ಪುಟ್ಟಪ್ಪ ಗೌಡ, ನಂಜವಳ್ಳಿ | ಅಕ್ರಮ-ಸಕ್ರಮ ಯೋಜನೆ ಬಗ್ಗೆ. | ಹೊಸನಗರ | ಅಕ್ರಮ-ಸಕ್ರಮ ಯೋಜನೆಯಡಿ ಸಕ್ರಮೀಕರಣಗೊಂಡ ಫಲಾನುಭವಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವ ಡಿ.ಪಿ.ಆರ್ ನ್ನು ಈಗಾಗಲೇ ನಿಗಮ ಕಛೇರಿಗೆ ಟೆಂಡರ್ ಪ್ರಕ್ರಿಯೆಗೆ ಸಲ್ಲಿಸಲಾಗಿರುತ್ತದೆ. |
| | ...ಕೋಡೂರು | ಕೋಡೂರು ಕ್ಯಾಂಪಿನಲ್ಲಿ ಮಾರ್ಗದಾಳುಗಳು ರಾತ್ರಿ ವೇಳೆ ತಂಗುವುದು. | ರಿಪ್ಪನ್ ಪೇಟೆ | ಹಾಲೀಯಾಗಿ 3 ಜನ ಪವರ್‌ಮ್ಯಾನ್ ಗಳು ಸದರಿ ಕ್ಯಾಂಪಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಇವರುಗಳಲ್ಲಿ ಒಬ್ಬರನ್ನು ಕ್ಯಾಂಪಿನಲ್ಲಿಯೇ ವಾಸವಿರುವಂತೆ ಕ್ರಮ ಕೈಗೊಳ್ಳಲಾಗುವುದು. |

ಕಾ ಮತ್ತು ಪಾಲನೆ ಶಾಖೆ
ಮಂ.ವಿ.ಸ.ಕಂ..ಸಾಗರ
ಸ.ಕಾ.
ಕಾ.ನಿ.ಇಂ(ವಿ)

AEE(I)

| | | | | |
|---|---|---|---|---|
| 4 | ಗುರುರಾಜ್, ನಗರ | ಆರ್.ಆರ್.ಸಂಖ್ಯೆ: NAEH-9 ಕ್ಕೆ ಗೃಹ ಜ್ಯೋತಿ ಯೋಜನೆಗೆ ಒಳಪಡುವಂತೆ | ನಗರ | ಸದರಿಯವರ ದಾಖಲಾತಿಗಳನ್ನು ಪರಿಶೀಲಿಸಿ ಗೃಹ ಜ್ಯೋತಿ ಯೋಜನೆಗೆ ಒಳಪಡಿಸಲಾಯಿತು. |

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ)
ಕಾರ್ಯ ಮತ್ತು ಪಾಲನೆ ಉಪವಿಭಾಗ
ಮಂವಿಸಕಂ, ಹೊಸನಗರ.

ಪ್ರತಿಗಳು:

1. ಗೌರವಪೂರ್ವಕವಾಗಿ ಅಧೀಕ್ಷಕ ಇಂಜಿನೀಯರ್(ವಿ), ಕಾ ಮತ್ತು ಪಾ ವೃತ್ತ, ಮಂವಿಸಕಂ, ಶಿವಮೊಗ್ಗ ಇವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಗೌರವಪೂರ್ವಕವಾಗಿ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಪಾಲನೆ ಮತ್ತು ನಿರ್ವಹಣೆ ವಿಭಾಗ, ಮಂವಿಸಕಂ, ಸಾಗರ ಇವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಸಹಾಯಕ ಇಂಜಿನೀಯರ್(ವಿ),ತಾಂತ್ರಿಕ ಶಾಖೆ, ಮಂವಿಸಕಂ, ಹೊಸನಗರ
4. ಶಾಖಾಧಿಕಾರಿ, ನಿ ಮತ್ತು ಪಾ ಶಾಖೆ, ಮಂವಿಸಕಂ, ಹೊಸನಗರ/ನಗರ/ರಿಪ್ಪನ್ ಪೇಟೆ
5. ಸಹಾಯಕ ಲೆಕ್ಕಾಧಿಕಾರಿಗಳು, ಕಂದಾಯ ಶಾಖೆ, ಮಂವಿಸಕಂ, ಹೊಸನಗರ
6. ಕಛೇರಿ ಪ್ರತಿ.

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ


ಮೆಸ್ಕಾಂ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ) ರವರ ಕಛೇರಿ — ದೂರವಾಣಿ :08186244238

ಕಾರ್ಯ ಮತ್ತು ಪಾಲನೆ ಉಪವಿಭಾಗ

MESCOM ಜೋಗ

ಇ-ಮೇಲ್ :aeemescomjog@rediffimail.com


ಕ್ರ.ಸಂ. ಸಕಾನಿಇಂ(ವಿ)/ಸ.ಇಂ(ತಾಂ)/ಜೋಗ/23-24/1891 ದಿನಾಂಕ: 7-10-2

## ದಿನಾಂಕ:15.09.2023 ರಂದು ನಡೆದ ಜನಸಂಪರ್ಕ ಸಭೆಯ ನಡಾವಳಿಗಳು:

ದಿನಾಂಕ:15.09.2023 ರಂದು ಮೆಸ್ಕಾಂ, ಜೋಗ ಉಪವಭಾಗ ವತಿಯಿಂದ ಖಂಡಿಕಾ ಗ್ರಾಮಪಂಚಾಯತಿಯ ಸಭಾಂಗಣದಲ್ಲಿ ಜನಸಂಪರ್ಕ ಸಭೆಯನ್ನು, ಶ್ರೀ ಶಶಿಧರ್ .ಜಿ , ಮಾನ್ಯ ಅಧಿಕ್ಷಕ ಇಂಜಿನಿಯರ್(ವಿ), ಶಿವಮೊಗ್ಗ ವೃತ್ತ ರವರ ನೇತೃತ್ವದಲ್ಲಿ ನಡೆಸಲಾಯಿತು. ಸದರಿ ಜನಸಂಪರ್ಕ ಸಭೆಯ ಕಾರ್ಯಕ್ರಮದಲ್ಲಿ ಈ ಕೆಳಕಂಡ ಮೆಸ್ಕಾಂನ ಅಧಿಕಾರಿ/ನೌಕರರು ಹಾಗೂ ಖಂಡಿಕಾ ಗ್ರಾಮ ಪಂಚಾಯತಿಯ ವ್ಯಾಪ್ತಿಯ ಗ್ರಾಮಸ್ಥರು /ಗ್ರಾಹಕರು ಹಾಜರಿರುತ್ತಾರೆ.

1. ಶ್ರೀ ಶಶಿಧರ್ .ಜಿ , ಅಧೀಕ್ಷಕ ಇಂಜಿನಿಯರ್(ವಿ), ಶಿವಮೊಗ್ಗ ವೃತ್ತ ಕಛೇರಿ
2. ಶ್ರೀ ಪ್ರವೀಣ್. ಪಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),(ಪ್ರ) ಜೋಗ ಉಪವಿಭಾಗ
3. ಶ್ರೀ ಸವಿತ ಎಸ್. ಸಹಾಯಕ ಲೆಕ್ಕಾಧಿಕಾರಿ, ಜೋಗ ಉಪವಿಭಾಗ
4. ಶ್ರೀ ಸಂತೋಷ್ ಕುಮಾರ್ ಗೌಡ ಕಿರಿಯ ಇಂಜಿನಿಯರ್(ವಿ), ಜೋಗ ಶಾಖೆ
5. ಶ್ರೀ ಯಶವಂತೆ ಜೈನ್, ಕಿರಿಯ ಇಂಜಿನಿಯರ್(ವಿ), ತಾಳಗುಪ್ಪ ಶಾಖೆ
6. ಶ್ರೀಮತಿ ಅನುಪಮಾ ಸಾರಂಗ ಅಧ್ಯಕ್ಷರು ಖಂಡಿಕಾ ಪಂಚಾಯತಿ
7. ಶ್ರೀ ಹೆಚ್ ಎಂ ಸದಾಶಿವ್ ಭಟ್ಟ್ ಉಪಾಧ್ಯಕ್ಷರು ಖಂಡಿಕಾ ಪಂಚಾಯತಿ
8. ಶ್ರೀ ಕೆ ಈಶ್ವರ ನಾಯ್ಕ್ ಕುಗ್ವೆ
9. ಶ್ರೀ ಜಿ ಎಸ್ ಕೃಷ್ಣ ಮೂರ್ತಿ ಗೋರ್ಗದ್ದೆ
10. ಶ್ರೀ ಜನಾರ್ಧನ್ ಭಟ್ಟ್ ಕುಗ್ವೆ
11. ಶ್ರೀಮತಿ ವಿಧ್ಯಾ ಎಂ ಪಿ ಸಿ ಡಿ ಪಿಓ ಮೇಲ್ವಿಚಾರಕರು ಸಾಗರ
12. ಶ್ರೀಮತಿ ಆಶಾ ಹೆಗಡೆ ಮರಹಾನ ಕುಳಿ
13. ಶ್ರೀ ಕೃಷ್ಣಪ್ಪ ಸಿ ಕಾರ್ಯದರ್ಶಿ ಖಂಡಿಕಾ ಪಂಚಾಯತಿ
14. ಶ್ರೀಮತಿ ನಾಗಮಣಿ

ಮೊದಲಿಗೆ, ಶ್ರೀ ಪ್ರವೀಣ ಪಿ, ಪ್ರಭಾರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪವಿಭಾಗ, ಜೋಗ ಇವರು ಸಭೆಯನ್ನು ಉದ್ದೇಶಿಸಿ ಮಾತನಾಡಿ ಕರ್ನಾಟಕ ಸರ್ಕಾರ ಹಾಗೂ ಮೆಸ್ಕಾಂ ಕಂಪನಿಯು ಗ್ರಾಮೀಣ ಪ್ರದೇಶಗಳಲ್ಲಿನ ವಿದ್ಯುತ್ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ/ ಕಾರ್ಯಗತಗೊಳಿಸುತ್ತಿರುವ ವಿವಿಧ ಕಾರ್ಯಕ್ರಮಗಳ ಬಗ್ಗೆ ಸಭೆಗೆ ತಿಳಿಯಪಡಿಸಿದರು. ಅವುಗಳಲ್ಲಿ ಪ್ರಮುಖವಾದವು,

1. ವಿಫಲವಾದ ಪರಿವರ್ತಕಗಳನ್ನು 24 ಗಂಟೆಗಳೊಳಗಾಗಿ ಬದಲಾಯಿಸಲು ಅನುಸರಿಸುತ್ತಿರುವ ಕ್ರಮಗಳ ಬಗ್ಗೆ ತಿಳಿಸಿದರು.
2. ಪರಿವರ್ತಕಗಳು ವಿಫಲವಾಗದಂತೆ ತಡೆಯಲು ಕಂಪನಿಯು ಅನುಸರಿಸುತ್ತಿರುವ ಪರಿವರ್ತಕ ಕೇಂದ್ರಗಳ ನಿರ್ವಹಣೆ ಅಭಿಯಾನದ ಬಗ್ಗೆ ಸವಿವರವಾಗಿ ತಿಳಿಯಪಡಿಸಿದರು.
3. ಶಾಲಾ ಆವರಣಗಳಲ್ಲಿ ಹಾದು ಹೋಗಿರುವ ವಿದ್ಯುತ್ ಮಾರ್ಗಗಳನ್ನು ಶಾಲಾ ಮಕ್ಕಳ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಆವರಣದ ಹೊರಭಾಗಕ್ಕೆ ಸ್ಥಳಾಂತರಿಸಲು ಕೈಗೊಂಡ ಕ್ರಮಗಳ ಬಗ್ಗೆ ಸವಿವರವಾಗಿ ತಿಳಿಯಪಡಿಸಿದರು.



Scanned with AnyScanner

4. ಗ್ರಾಹಕ ಸಂವಾದ ಸಭೆ ಹಾಗೂ ಜನಸಂಪರ್ಕ ಸಭೆ ಕಾರ್ಯಕ್ರಮವು. ಮೆಸ್ಕಾಂನ ಉತ್ತಮ ಕಾರ್ಯಕ್ರಮವಾಗಿದ್ದು, ಗ್ರಾಮೀಣ ಪ್ರದೇಶದಲ್ಲಿನ ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ತ್ವರಿತಗತಿಯಲ್ಲಿ ಪರಿಹರಿಸಲು ಪ್ರತಿ ತಿಂಗಳ 3ನೇ ಶನಿವಾರ ಉಪವಿಭಾಗದ ಒಂದು ಗ್ರಾಮವನ್ನು ಆಯ್ಕೆ ಮಾಡಿ (ಹೆಚ್ಚಾಗಿ ವಿದ್ಯುತ್ ಸಮಸ್ಯೆಯಿರುವ/ತಾಲ್ಲೂಕಿನ ಕೊನೆಯ ಹಳ್ಳಿ) ಅಲ್ಲಿಗೆ ಖುದ್ದಾಗಿ ಮೆಸ್ಕಾಂ ಅಧಿಕಾರಿಗಳು ಹಾಜರಿದ್ದು, ಗ್ರಾಹಕ ಸಂವಾದ ಸಭೆ ನಡೆಸಿ ಸಭೆಯಲ್ಲಿ ಪ್ರಸ್ತಾಪಿಸುವ ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ದಾಖಲಿಸಿಕೊಂಡು ಸಾಧ್ಯವಾದಲ್ಲಿ ಸ್ಥಳೀಯವಾಗಿ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗುವುದು. ಸಾಧ್ಯವಾಗದಿದ್ದಲ್ಲಿ ಸಮಸ್ಯೆಗಳ ನಿವಾರಣೆಗೆ ತೆಗೆದುಕೊಳ್ಳಬಹುದಾದ ಕ್ರಮಗಳನ್ನು ಶಿಫಾರಸ್ಸಿನೊಂದಿಗೆ ಮೇಲಾಧಿಕಾರಿಳಿಗೆ ಸಲ್ಲಿಸಲಾಗುವುದು ಎಂದು ಸಭಗೆಗೆ ತಿಳಿಯ ಪಡಿಸಿದರು.

4. ಜನಸಂಪರ್ಕ ಸಭೆ ಕಾರ್ಯಕ್ರಮದ ಕಾರ್ಯ ಸೂಚಿಯಂತೆ ಮೆಸ್ಕಾಂ ಸಹಾಯವಾಣಿ –1912 ನ ಗ್ರಾಹಕ ಸೇವಾಕೇಂದ್ರ ಕಾರ್ಯ ವೈಖರಿಯ ಬಗ್ಗೆ ತಿಳಿಸಿ, ಅದರ ಉಪಯೋಗ ಪಡೆದುಕೊಳ್ಳುವ ನಿಟ್ಟಿನಲ್ಲಿ ಗ್ರಾಹಕರಲ್ಲಿ ಹೆಚ್ಚಿನ ಪ್ರಚಾರದ ಅವಶ್ಯಕತೆ ಇರುವುದಾಗಿ ತಿಳಿಸಿ, ಮುಂದಿನ ದಿನಗಳಲ್ಲಿ ಅದರ ಹೆಚ್ಚಿನ ಉಪಯೋಗ ಪಡೆದುಕೊಳ್ಳಲು ಗ್ರಾಹಕರಲ್ಲಿ ಅರಿವು ಮೂಡಿಸಿದರು.

5. ಗ್ರಾಹಕರು ವಿದ್ಯುತ್ ಬಳಕೆ ಮಾಡುವ ಸ್ಥಾವರಗಳಲ್ಲಿ/ಸ್ಥಳಗಳಲ್ಲಿ ವಿದ್ಯುತ್‌ನ್ನು ಸುರಕ್ಷಿತವಾಗಿ ಉಪಯೋಗಿಸಲು ಮತ್ತು ವಿದ್ಯತ್ ಅಪಘಾತಗಳನ್ನು ತಡೆಗಟ್ಟಲು ಅನುಸರಿಸಬೇಕಾದ ಒಟ್ಟು 30 ಸಂಖ್ಯೆಯ ಅಂಶಗಳ ಸುರಕ್ಷತಾ ಕ್ರಮಗಳನ್ನು ಸವಿವರವಾಗಿ ಸಭೆಗೆ ತಿಳಿಯ ಪಡಿಸಿ, ಕೂಡಲೇ ಮುಂಜಾಗ್ರತ ಕ್ರಮಗಳನ್ನು ಕೈಗೊಳಲು ಸೂಚಿಸಿದರು.

6. ಒಂದು ಯೂನಿಟ್ ಉಳಿತಾಯ ಮಾಡುವುದು ಎರಡು ಯೂನಿಟ್ ಉತ್ಪಾದನೆಗೆ ಸಮ ಎಂಬ ವಿಷಯವನ್ನು ಸಭಗೆ ತಿಳಿಸಿ, ಗ್ರಾಹಕರು ತಮ್ಮ ಸ್ಥಾವರಗಳಲ್ಲಿ ವಿದ್ಯತ್ ಉಳಿತಾಯ ಮಾಡಲು ಅನುಸರಿಸಬೇಕಾದ ಕ್ರಮಗಳು 5* ರೇಟಿಂಗ್ ವಿದ್ಯುತ್ ಉಪಕರಣಗಳು/ಪಂಪ್ ಸೆಟ್ ಗಳನ್ನು ಹಾಗು ಮನೆಗಳಲ್ಲಿ ಎಲ್ ಇ ಡಿ ವಿದ್ಯುತ್ ಬಲ್ಬು ಗಳನ್ನು ಹೆಚ್ಚಾಗಿ ಬಳಸಲು ಉಪಯೋಗಿಸಲು ಉತ್ತೇಜಿಸಿದರು.

7. ವಿದ್ಯುತ್ ಕಳ್ಳತನವು ಶಿಕ್ಷಾರ್ಹ ಅಪರಾಧ ಎಂದು ಸಭಗೆ ತಿಳಿಸಿ ವಿದ್ಯುತ್ ಕಳ್ಳತನದ ವಿವಿಧ ಪ್ರಕಾರಗಳಾದ –ನೇರ ಸಂಪರ್ಕ, ಅನಧಿಕೃತ ಸಂಪರ್ಕ, ಮಾಪಕದ ಟ್ಯಾಪರಿಂಗ್, ಮಂಜೂರಾತಿ ಪ್ರಮಾಣಕ್ಕಿಂತ ಹೆಚ್ಚಿನಹೊರೆ ಬಳಸುವುದು, ಜಕಾತಿಯ ದುರ್ಬಳಕೆ, ಅನಧಿಕೃತ ವಿದ್ಯುತ್ ಮಾರ್ಗದ ಜೋಡಣೆಗಳ ಬಗ್ಗೆ ಸವಿವರವಾಗಿ ತಿಳಿಸಿ, ವಿದ್ಯುತ್ ಕಳ್ಳತನ ಮಾಡದಂತೆ ಗ್ರಾಹಕರಲ್ಲಿ ಅರಿವು ಮೂಡಿಸಿದರು.

8. ಗೃಹ ಜ್ಯೋತಿ ಯೋಜನೆಯು ಕರ್ನಾಟಕ ಸರ್ಕಾರದ ಮಹತ್ವಕಾಂಕ್ಷೆಯ ಯೋಜನೆಯಾಗಿದ್ದು ಈ ಯೋಜನೆಯಡಿಯಲ್ಲಿ ರಾಜ್ಯದ ಪ್ರತಿ ಮನೆಗೆ, ಪ್ರತಿ ತಿಂಗಳಿಗೆ ಗರಿಷ್ಟ 200 ಯೂನಿಟ್‌ಗಳ ವರೆಗಿನ ಬಳಕೆಯ ಮಿತಿಯಲ್ಲಿ ಪ್ರತಿ ಗ್ರಾಹಕರ ಮಾಸಿಕ ಸರಾಸರಿ ಬಳಕೆಯ ಯೂನಿಟ್ ಮೇಲೆ ಶೇ.10% ರಷ್ಟು ಹೆಚ್ಚಿನ ಬಳಕೆಯ ಮಿತಿಗೆ ಅರ್ಹರಿರುತ್ತಾರೆ. ಸದರಿ ಯೋಜನೆಯಲ್ಲಿ ಫಲನಾಭವಿ ಯಾಗಲು ಸೇವಾಸಿಂಧು ಪೋರ್ಟಲ್‌ನಲ್ಲಿ ಆಧಾರ್ ಕಾರ್ಡ ಮತ್ತು ಗ್ರಾಹಕರ ಐಡಿಗಳ ಮಾಹಿತಿಯನ್ನು ನೀಡಿ ನೊಂದಾಣಿ ಮಾಡಬೇಕಾಗಿದ್ದು ಪ್ರಸ್ತುತ ಗ್ರಾಮ ಓನ್ ಮತ್ತು ಮೆಸ್ಕಾಂ ಕಛೇರಿಗಳಲ್ಲಿ ನೊಂದಾಣಿ ಮಾಡಲಾಗುತ್ತಿದ್ದು ಗ್ರಾಹಕರು ಸದರಿ ಯೋಜನೆ ಸದುಪಯೋಗ ಪಡಿಸಿಕೊಳ್ಳುವಂತೆ ಸಭೆಗೆ ತಿಳಿಯ ಪಡಿಸಿದರು

9. ವಿದ್ಯುತ್ ಬಿಲ್ಲಿನ ದೋಷ/ಸಂದೇಹಗಳೇನಾದರೂ ಕಂಡುಬಂದಲ್ಲಿ ಗ್ರಾಹಕರು ಖುದ್ದಾಗಿ, ಕೂಡಲೇ ಹತ್ತಿರದ ಮವಿಸಕಂ ಕಛೇರಿಯಲ್ಲಿನ ಅಧಿಕಾರಿಗಳನ್ನು ಸಂಪರ್ಕಿಸುವುದರ ಮೂಲಕ ತ್ವರಿತವಾಗಿ ಪರಿಹರಿಸಿಕೊಳ್ಳುವಂತೆ ಗ್ರಾಹಕರಿಗೆ ತಿಳಿಯಪಡಿಸಿದರು.

10. ಕಂಪನಿಯ ಯಾವದೇ ಅಭಿವೃದ್ಧಿ ಕಾರ್ಯವನ್ನು ಯಶಸ್ವಿಗೊಳಿಸಲು, ಕಂಪನಿಯು ಆರ್ಥಿಕವಾಗಿ ಸಧೃಡವಾಗಿರ ಬೇಕಾಗುತ್ತದೆ. ಆ ನಿಟ್ಟಿನಲ್ಲಿ ಗ್ರಾಹಕರು ತಮ್ಮ ವಿದ್ಯುತ್ ಬಿಲ್ಲನ್ನು ನಿಗದಿತ ಸಮಯದೊಳಗೆ ಪಾವತಿಸುವುದು ಅತ್ಯಂತ ಅವಶ್ಯಕವಾಗಿರುತ್ತದೆ. ವಿದ್ಯುತ್ ಬಿಲ್ಲನ್ನು ಪಾವತಿಸಲು ಗ್ರಾಹಕರು ಹೆಚ್ಚಾಗಿ ಮೊಬೈಲ್ ಆ್ಯಪ್‌ಗಳಾದ ನಮ್ಮ ಮೆಸ್ಕಾಂ/ಗೂಗಲ್‌ಪೇ/ಪೋನ್ ಪೇ/ಪೇಟಿಯಂ ಆ್ಯಪ್‌ಗಳನ್ನು ಬಳಸಿ ಆನ್‌ಲೈನ್ /ಮೊಬೈಲ್ ಮುಖಾಂತರವೇ ವಿದ್ಯುತ್ ಬಿಲ್ ಪಾವತಿಸಲು ಉತ್ತೇಜಿಸಿದರು ಮತ್ತು ಸದರಿ ಪಾವತಿಯನ್ನು ಗ್ರಾಮೀಣ ಭಾಗದಲ್ಲಿ ಮಾಡಲು ಅನುಸರಿಸಬೇಕಾದ ಕ್ರಮವನ್ನು ಸಭೆಗೆ ಪ್ರಾಯೋಗಿಕವಾಗಿ ಮೊಬೈಲ್ ನಲ್ಲಿ ತೋರಿಸಿ ತಿಳಿಯ ಪಡಿಸಿದರು.



Scanned with AnyScanner

**ಸಭೆಯಲ್ಲಿ ಚರ್ಚಿಸಿದ ವಿಷಯಗಳು:-**

1. ಶ್ರೀ ಮಹಾಬಲೇಶ್ವರ್, ಖಂಡಿಕ ಗ್ರಾಮಸ್ಥರು, ಮಾತನಾಡಿ ಖಂಡಿಕಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿರುವ ಎಫ್ -6 ಹಂಸಗಾರು ವಿತರಕಕ್ಕೆ ಪ್ರಸ್ತುತ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯ ವರೆಗೂ 3 ಫೇಸ್ ವಿದ್ಯುತ್ ಸರಬರಾಜು ಮಡಲಾಗುತ್ತಿದೆ. ಆದರೆ ಖಂಡಿಕಾ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಓವರ್ ಹೆಡ್ ಟ್ಯಾಂಕ್ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡುವ ವ್ಯವಸ್ಥೆ ಇಲ್ಲದೇ ಇರುವ ಕಾರಣ , ಪ್ರತಿ ದಿನ 3 ಫೇಸ್ ವಿದ್ಯುತ್ ಸರಬರಾಜು ಮಾಡುವ ವೇಳೆಯಲ್ಲಿ ಅಂದರೆ 10 ಗಂಟೆಗೆ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದ್ದು, ಅದೇ ಸಮಯಕ್ಕೆ ಸರಿಯಾಗಿ ಎಲ್ಲಾ ಸಾರ್ವಜನಿಕರು ಕೆಲಸಕ್ಕೆ ಹೋಗುವುದರಿಂದ ಕುಡಿಯುವ ನೀರನ್ನು ಶೇಖರಿಸಲು ಸಾಧ್ಯವಾಗುತ್ತಿಲ್ಲ. ಆದ ಕಾರಣ ವಿದ್ಯುತ್ ಸರಬರಾಜುನ್ನು ಬೆಳಿಗ್ಗೆ 8 ರಿಂದ ಸಂಜೆ 4 ರವರಗೆ ನೀಡುವಂತೆ ಮನವಿ ಮಾಡಿದರು.

ಉತ್ತರವಾಗಿ ಮಾತನಾಡಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಸದರಿ ಪ್ರಸ್ತಾವನೆಯನ್ನು ಕೋರಿ ಕವಿಪ್ರನಿನಿ ತಾಳಗುಪ್ಪ ರವರಿಗೆ ಪತ್ರ ಬರೆಯಲಾಗಿದ್ದು, ಅಗತ್ಯ ಕ್ರಮ ಕೈಗೊಳ್ಳಲಾಗುವುದುಎಂದು ಸಭೆಗೆ ತಿಳಿಸಿದರು.

2. ಅರೇಹದ್ದ ಗ್ರಾಮದ 25 ಕೆ ವಿ ಪರಿವರ್ತಕಕ್ಕೆ ಹಾಲಿ ಕೋಗೋಡು ನಿಂದ 11 ಕೆ ವಿ ವಿದ್ಯುತ್ ಸರಬರಾಜು ಆಗುತ್ತಿದ್ದು ಸದರಿ ಮಾರ್ಗವು ಅಕೇಶೀಯ ಪ್ಲಾಂಟೆಶನ್ ಮದ್ಯದಲ್ಲಿ ಹಾದು ಬಂದಿರುವ ಕಾರಣ ಪದೆ ಪದೆ ಮರಗಳ ಬೀಳುವಿಕೆಯಿಂದ ಮಾರ್ಗ ವಿದ್ಯುತ್ ಅಡಚಣೆ ಉಂಟಾಗಿ ತಿರ್ವ ತೊಂದರೆ ಉಂಟಾಗುತ್ತಿದ್ದು ಸದರಿ ಮಾರ್ಗವನ್ನು ಮರಡು ಮನೆಯಿಂದ ಅರೇಹದ್ದ ಮಾರ್ಗದ ರಸ್ತೆಯ ಮಾರ್ಗದಲ್ಲಿ ಸ್ಥಳಾಂತರಿಸಿ ಕೊಡಬೇಕಾಗಿ ಮನವಿ ಮಾಡಿದರು.

ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡಿ ಶಾಖಾಧಿಕಾರಿಗಳು,ತಾಳಗುಪ್ಪ ರವರಿಗೆ ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

3. ಮರಡು ಮನೆಯ ಎಂ ಆರ್ ರಾಜೇಂದ್ರ ಇವರು ಮತಾನಾಡಿ ಸದರಿ ರವರ ಮನೆಯ ಹತ್ತಿರ ಇರುವ 25 ಕೆ ವಿ ಒಂದು ಕಂಬದ ಪರಿರ್ವತಕ ಕೇಂದ್ರವನ್ನು ಎರಡು ಕಂಬಗಳ ಪರಿವರ್ತಕ ಕೇಂದ್ರವಾಗಿ ಬದಲಾಯಿಸಲು ಮನವಿ ಮಾಡಿದರು.

ಮಾನ್ಯ ಅ.ಇಂ(ವಿ) ರವರು ಈ ಬಗ್ಗೆ ಪರಿಶೀಲಿಸಿ ಸಿಸ್ಟಮ್ ಇಂಪ್ರೂಮೆಂಟ್ ಅಡಿಯಲ್ಲಿ ಸಿಂಗಲ್ ಪೋಲ್ ಪರಿವರ್ತಕ ಕೇಂದ್ರವನ್ನು ಜೋಡಿ ಕಂಭ ಪರಿವರ್ತಕ ಕೇಂದ್ರಕ್ಕೆ ಬದಲಾಯಿಸಿಕೊಡುವಂತೆ ಶಾಖಾಧಿಕಾರಿಗಳಿಗೆ ತಿಳಿಸಿದರು.

4. ಮರಹಾನುಕುಳಿ 25 ಕೆವಿ ಪರಿವರ್ತಕ ಕೇಂದ್ರದ ಜೋಡಿ ಕಂಬಗಳ ಸ್ಟ್ರಕ್ಚರ್ ವಾಲಿದ ಸ್ಥಿತಿಯಲ್ಲಿದ್ದು ಕೂಡಲೇ ಸರಿಪಡಿಸಲು ಮನವಿ ಮಾಡಿದರು.

ಅಧೀಕ್ಷಕ ಇಂಜಿನಿಯರ್(ವಿ)ರವರು ಮಾತನಾಡಿ ತುರ್ತಾಗಿ ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿಗಳು ತಾಳಗುಪ್ಪ ರವರಿಗೆ ಸೂಚಿಸಿದರು

5. ಗೋಟಗಾರು ಮರಹಾನುಕುಳಿ ಗುರಲುಮಂಜಿ ಊರುಗಳಲ್ಲಿರುವ ಎಲ್ ಟಿ ಮಾರ್ಗಗಳು ತುಂಬಾ ಹಳೆಯದಾಗಿದ್ದು ಹೊಸ ವಾಹಕದಿಂದ ರೀಕಂಡಕ್ಟ್ರಿರಿಂಗ್ ಮಾಡಿಸುವಂತೆ ಮನವಿ ಮಾಡಿದರು.

ಅಧೀಕ್ಷಕ ಇಂಜಿನಿಯರ್(ವಿ)ರವರು ಮಾತನಾಡಿ ತುರ್ತಾಗಿ ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿಗಳು ತಾಳಗುಪ್ಪ ರವರಿಗೆ ಸೂಚಿಸಿದರು

6. 63 ಕೆ ವಿ ಕೋಗೋಡು ಪರಿವರ್ತಕ ದ ಜಿಓ ಟ್ ಹಾಗೂ ಎಲ್ ಟಿ ಪಿ ಕಿಟ್ ಹಾಳಾಗಿದ್ದು ಸರಿಪಡಿಸಲು ಮನವಿ ಮಾಡಿದರು.

ಅಧೀಕ್ಷಕ ಇಂಜಿನಿಯರ್(ವಿ)ರವರು ಮಾತನಾಡಿ ತುರ್ತಾಗಿ ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿಗಳು ತಾಳಗುಪ್ಪ ರವರಿಗೆ ಸೂಚಿಸಿದರು

Scanned with AnyScanner

7. ಆರೇಹದ್ದ ಗ್ರಾಮದ ಮಕ್ಕಿ ಊರಿಗೆ ಸುಮಾರು 2 ಕೀಮಿ ದೂರದಲ್ಲಿರುವ ಕಿಬ್ಬಚ್ಚಲು ಪರಿವರ್ತಕದಿಂದ ವಿದ್ಯುತ್ ಸರಬರಾಜು ಅಗುತ್ತಿದ್ದು ಗ್ರಾಮದ ಕೊನೆಯ ಮನೆಗಳಿಗೆ ಲೋ ವೋಲ್ಟೆಜ್ ಸಮಸ್ಯೆ ಉಂಟಾಗಿದ್ದು ಮಕ್ಕಿ ಊರಿಗೆ ಪ್ರತ್ಯೇಕ ಪರಿವರ್ತಕ ಆಳವಡಿಸುವಂತೆಮನವಿ ಮಾಡಿದರು.

ಅಧೀಕ್ಷಕ ಇಂಜನಿಯರ್(ವಿ)ರವರು ಮಾತನಾಡಿ ತುರ್ತಾಗಿ ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿಗಳು ತಾಳಗುಪ್ಪ ರವರಿಗೆ ಸೂಚಿಸಿದರು

8. ಕೋಗೋಡು ಅತ್ತಿಮನೆ ಕ್ರಷ್ಣ ಮೂರ್ತಿ ಹಿಂಭಾಗ ಹಾದು ಹೋಗಿರುವ 11 ಕೆ ವಿ ಮಾರ್ಗವು ತುಂಬಾ ಕೆಳಮಟ್ಟದಲ್ಲಿದ್ದು ಸರಿಪಡಿಸಲು ಮನವಿ ಮಾಡಿದರು.

ಅಧೀಕ್ಷಕ ಇಂಜನಿಯರ್(ವಿ)ರವರು ಮಾತನಾಡಿ ಶೀಘ್ರವಾಗಿ ಸಮಸ್ಯೆ ಬಗೆಹರಿಸಿಕೊಡುವಂತೆ ಶಾಖಾಧಿಕಾರಿಗಳು ತಾಳಗುಪ್ಪ ರವರಿಗೆ ಸೂಚಿಸಿದರು

9. ಪಿ ಡಿ ಓ .ಖಂಡಿಕಾ ಪಂಚಾಯತಿ ರವರು ಮತನಾಡಿ ಪಂಚಾಯತಿಯ ಹಲವಾರು ಕಡೆಗಳಲ್ಲಿ ಪ್ರತಿ ಕಂಬಗಳಿಗೆ ಒಂದರಂತೆ ಸ್ವಿಚ್ ಆಳವಡಿಸಿಕೊಂಡು ಬೀದಿ ದೀಪ ಉಪಯೋಗಿಸಲಾಗುತ್ತಿದೆ ಬದಲಾಗಿ ಗ್ರಾಮದ ಎಲ್ಲಾ ಕಂಬಗಳಿಗು ಹೊಸದಾಗಿ ಒಂದು ಸ್ಟ್ರೀಟ್ ಲೈಟ್ ಫೇಸ್ ಎಳೆಸಿ ಒಂದೆ ಕಡೆಯಲ್ಲಿ ಟೈಮರ್ ಸ್ವಿಚ್ ಆಳವಡಿಸುವಂತೆ ಮನವಿ ಮಾಡಿದರು ಕೆಲವೊಂದು ಕುಡಿಯುವ ನೀರಿನ ಬೋರ್ ಪಾಯಿಂಟ್ ಗಳು ನೀರಿಲ್ಲದೇ ವಿಫಲವಾಗಿದ್ದು ಸದರಿ ಸ್ಥಾವರಗಳ ಆರ್ ಆರ್ ಸಂಖ್ಯೆಗಳನ್ನು ರದ್ದು ಪಡಿಸಲು ಮನವಿ ಮಾಡಿದರು.
10. ಅಧೀಕ್ಷಕ ಇಂಜಿನಿಯರ್(ವಿ)ರವರು ಮಾತನಾಡಿ ಸ್ಟ್ರೀಟ್ ಲೈಟ್ ಫೇಸ್ ಮಾರ್ಗವನ್ನು ಪಂಚಾಯಿತಿ ವತಿಯಿಂದಲೇ ಸ್ವಯಂ ಆರ್ಥಿಕ ಯೋಜನೆಯಲ್ಲಿ ನಿರ್ವಹಿಸಿಕೊಳ್ಳಲು ಸೂಚಿಸಿದರಲ್ಲದೆ, ಪಂಚಾಯಿತಿಯ ಕುಡಿಯುವ ನೀರಿನ ಸ್ಥಾವರಗಳು ಚಾಲನೆಯಲ್ಲಿ ಇಲ್ಲದೆ ಇದ್ದಲ್ಲೆ ಅರ್ಜಿ ಸಲ್ಲಿಸಿ ಸ್ಥಾವರವನ್ನು ರದ್ದುಪಡಿಸಿಕೊಳ್ಳಲು ಪಿ.ಡಿ.ಓ.ಗಳಿಗೆ ಸೂಚಿಸಲಾಯಿತು
11. ಗಾಡಿಗೇರೆ ಹಾಗೂ ಮಾರನಕುಳಿ ಗ್ರಾಮದ ಅಂಗನವಾಡಿ ಕೇಂದ್ರಗಳು ಬೇರೆಡೆಗೆ ಸ್ಥಳಾಂತರವಾಗಿದ್ದು ಸ್ಥಳಾಂತರ ಗೊಂಡ ಸ್ಥಾವರಕ್ಕೆ ಮಾಪಕ ಗಳನ್ನು ಸಹಾ ಸ್ಥಳಾಂತರ ಮಾಡುವಂತೆ ಮನವಿ ಮಾಡಿದರು.

ಅಧೀಕ್ಷಕ ಇಂಜನಿಯರ್(ವಿ)ರವರು ಮಾತನಾಡಿ ಅಗತ್ಯ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿಗಳು ತಾಳಗುಪ್ಪ ರವರಿಗೆ ಸೂಚಿಸಿದರು.

ಕೆ ಈಶ್ವರ ನಾಯ್ಕ ಕುಗ್ವೆ ರವರು ಮಾತನಾಡಿ ಮೆಸ್ಕಾಂನ ಎಲ್ಲಾ ಸಿಬ್ಬಂದಿಗಳು ಹಾಗು ಅಧಿಕಾರಿಗಳು ಗ್ರಾಹಕರ ಸಮಸ್ಯೆಗಳಿಗೆ ಉತ್ತಮವಾಗಿ ಸ್ಪಂದಿಸುತ್ತಿರುವ ಕಾರ್ಯ ವೈಖರಿಯನ್ನು ಶ್ಲಾಘಿಸಿದರು. ಅಧೀಕ್ಷಕ ಇಂಜಿನಿಯರ್(ವಿ)ರವರು ಮಾತನಾಡಿ ಎಲ್ಲಾ ಸಿಬ್ಬಂದಿಗಳು ಹಾಗೂ ಅಧಿಕಾರಿಗಳಿಗೆ ಗ್ರಾಹಕರ ಸಮಸ್ಯೆಗಳಿಗೆ ಇನ್ನು ಹೆಚ್ಚಿನ ರೀತಿಯಲ್ಲಿ ಉತ್ತಮವಾಗಿ ಸ್ಪಂದಿಸುವಂತೆ ಸೂಚಿಸಿದರು. ಉಪವಿಭಾಗ ಎಲ್ಲಾ ಶಾಖಾಧಿಖಾರಿಗಳು ತಮ್ಮ ಶಾಖಾ ವ್ಯಾಪ್ತಿಯ ಗ್ರಾಮ ಸಭೆಗಳಿಗೆ ಹಾಜಾರಿದ್ದು ಸದರಿ ಭಾಗದ ಸಮಸ್ಯೆಗಳನ್ನು ತ್ವರಿತಗತಿಯಲ್ಲಿ ಪರಿಹರಿಸುವಂತೆ ಸೂಚಿಸಿದರು.

ಮೆಸ್ಕಾಂ ಸಂಭಂದಿತ ಯಾವುದೇ ಸಮಸ್ಯೆ ನೇರವಾಗಿ ಜೋಗ ಉಪವಿಭಾಗ ಕಛೇರಿ ಪತ್ರ ವ್ಯವಹರಿಸುವಂತೆ ಸೂಚಿಸಿ ಸದರಿ ಭಾಗದ ಗ್ರಾಹಕರಿಗೆ ಶಾಖಾಧಿಖಾರಿ ಹಾಗೂ ಸಹಾಯಕ ಕಾರ್ಯ ನಿರ್ವಹಕ ಇಂಜಿನಿಯರ್ ರವರ ದೂರವಾಣಿ ಸಂಖ್ಯೆಯನ್ನು ನೀಡಲಾಯಿತು

ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂಧಿಸಿ ಸಭೆಯನ್ನು ಮುಕ್ತಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪವಿಭಾಗ
ಮವಿಸಕಂ, ಜೋಗ

ಪ್ರತಿ ಗೌರವಪೂರ್ವಕವಾಗಿ,

1. ಮಾನ್ಯ ಅಧೀಕ್ಷಕ ಇಂಜನಿಯರ್(ವಿ) ಕಾ ಮತ್ತು ಪಾ ವೃತ್ತ ಕಛೇರಿ ಶಿವಮೊಗ್ಗ ರವರ ದಯಾಪರ ಅವಗಾಹನೆಗಾಗಿ
2. ಮಾನ್ಯ ಕಾರ್ಯನಿರ್ವಾಹಕ ಇಂಜನಿಯರ್(ವಿ),ಕಾ ಮತ್ತು ಪಾಲನಾ ವಿಭಾಗ, ಮೆಸ್ಕಾಂ, ಸಾಗರ ರವರ ದಯಾಪರ ಅವಗಾಹನೆಗಾಗಿ
3. ಕಛೇರಿ ಪ್ರತಿ

Scanned with AnyScanner

ಮೆಸ್ಕಾಂ
MESCOM

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ನೋಂದಾಯಿತಕಛೇರಿ : ಮೆಸ್ಕಾಂ ಭವನ, ಕಾವೂರು ಕ್ರಾಸ್, ಬಿಜೈ, ಮಂಗಳೂರು-575004.

ಕಾರ್ಪೋರೇಟ್ಐಡೆಂಟಿಟಿ ನಂಬರ್ :ಸಿಐಎನ್40109 ಕೆಎ2002 ಎಸ್‌ಜಿಸಿ030425. ವೆಬ್ ಸೈಟ್ ವಿಳಾಸ:www.mescom.karnataka.gov.in

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರ ಕಛೇರಿ, ದೂರವಾಣಿ : 08184-272506
ಕಾರ್ಯ ಮತ್ತು ಪಾಲನೆ ಸೊರಬ ಉಪವಿಭಾಗ,
ಮೆಸ್ಕಾಂ, ಸೊರಬ
ಇ-ಮೇಲ್ :aesorab@rediffmail.com

ಕ್ರಮಾಂಕ : ಸಕಾನಿಇಂ(ವಿ)/ಸಇಂ(ತಾಂ)/ಸೊರಬ/23-24/ 3078-3082 ದಿನಾಂಕ : 02/09/2023

ದಿನಾಂಕ: 01.08.2023ರಂದು ಬೆಳಗ್ಗೆ 10:30 ಗಂಟೆಗೆ ಸೊರಬ ಉಪವಿಭಾಗದ ಕಛೇರಿಯಲ್ಲಿ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಮವಿಸಕಂ, ಶಿವಮೊಗ್ಗ ಇವರ ಅಧ್ಯಕ್ಷತೆಯಲ್ಲಿ ನಡೆಸಲಾದ ಜನ ಸಂಪರ್ಕ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು:

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀ ಶಶಿಧರ್ ಎಸ್.ಜಿ | ಅಧೀಕ್ಷಕ ಇಂಜಿನಿಯರ್ (ವಿ) ಕಾರ್ಯ ಮತ್ತು ಪಾಲನೆ ವೃತ್ತ, ಮವಿಸಕಂ, ಶಿವಮೊಗ್ಗ |
| 2 | ಶ್ರೀ ಸತ್ಯಪ್ರಕಾಶ್.ಎಸ್ | ಸಕಾನಿಇಂ(ವಿ), ಕಾರ್ಯ ಮತ್ತು ಪಾಲನೆ ಉಪವಿಭಾಗ, ಮವಿಸಕಂ, ಸೊರಬ |
| 3 | ಶ್ರೀ ಉಮೇಶ.ಹೆಚ್.ಜಿ | ಸಹಾಯಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ಶಾಖೆ, ಮವಿಸಕಂ, ಸೊರಬ |
| 4 | ಶ್ರೀ ಸತೀಶ್ ಸೊಲ್ಲಾಪುರ | ಪ್ರಭಾರ ಸಹಾಯಕ ಲೆಕ್ಕಾಧಿಕಾರಿ, ಸೊರಬ |
| 5 | ಶ್ರೀ ಪ್ರವೀಣ್ ಕುಮಾರ್ | ಕಿರಿಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ಶಾಖೆ, ಮವಿಸಕಂ, ಚಂದ್ರಗುತ್ತಿ |
| 6 | ಶ್ರೀ ಸುರೇಶ್ ಬಿ.ಕೆ | ಕಿರಿಯ ಇಂಜಿನಿಯರ್(ವಿ), 24*7 ಮವಿಸಕಂ, ಸೊರಬ |

ಉಪವಿಭಾಗದ ಜನ ಸಂಪರ್ಕ ಸಭೆಗೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಮವಿಸಕಂ, ಶಿವಮೊಗ್ಗ ರವರು ಅಧ್ಯಕ್ಷತೆಯನ್ನು ವಹಿಸಿದ್ದು, ಸದರಿಯವರಿಗೆ ಸಭೆಗೆ ಗೌರವಾನ್ವಿತವಾದ ಸ್ವಾಗತವನ್ನು ಎಲ್ಲಾ ಅಧಿಕಾರಿ/ನೌಕರರ ಪರವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೊರಬ ರವರು ಕೋರಿದರು ಹಾಗೂ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳು ಹಾಗೂ ಗ್ರಾಹಕರಿಗೆ ಸ್ವಾಗತವನ್ನು ಕೋರಿದರು.

| ಕ್ರ.ಸಂ | ಗ್ರಾಹಕರ ಹೆಸರು & ವಿಳಾಸ | ದೂರಿನ ವಿವರ | ಕೈಗೊಂಡ ಕ್ರಮ |
|---|---|---|---|
| 1 | ಶ್ರೀಮತಿ ಯಶೋಧಮ್ಮ ಕೋಂ ರಾಮಪ್ಪ, ಕುಣಜಿಬೈಲು ಹಿರೇಶಕುನ ಸೊರಬ | ಮನೆಯ ವಿದ್ಯುತ್ ಸಂಪರ್ಕವನ್ನು ನಿರಂತರ ಜ್ಯೋತಿ ಮಾರ್ಗದಿಂದ ಸಂಪರ್ಕ ಕಲ್ಪಿಸಿಕೊಡುವ ಬಗ್ಗೆ. | ಕೂಡಲೇ ಸ್ಥಳ ಪರಿಶೀಲಿಸಿ ಕಂಪನಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. |
| 2 | ಶ್ರೀ ಉಮೇಶ್ ಪಾಟೀಲ್, ಹಿರೇಕಸವಿ, ರಾಜ್ಯ ಸಂಚಾಲಕರು, ರೈತ ಸಂಘ | ಎನ್.ಜೆ.ವೈ ಫೀಡರ್‌ನಲ್ಲಿ ವಿದ್ಯುತ್ ಅಡಚಣೆ ಕಡಿಮೆಗೊಳಿಸುವ ಬಗ್ಗೆ | ವಿದ್ಯುತ್ಅಡಚಣೆ ಕಡಿಮೆಗೊಳಿಸಲು ಕೂಡಲೇ ಕ್ರಮ ಕೈಗೊಳ್ಳಲು ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. |
| 3 | ಶ್ರೀ ಈಶ್ವರಪ್ಪ, ಕೊಡಕಣಿ, ತಾಲ್ಲೂಕು ಅಧ್ಯಕ್ಷರು, ರೈತಸಂಘ | ಇಂಡುವಳ್ಳಿಯಲ್ಲಿ ವಿದ್ಯುತ್ ವಿತರಣಾ ಕೇಂದ್ರವನ್ನು ನಿರ್ಮಿಸುವ ಕುರಿತು. | ಸದರಿ ವಿಷಯದ ಕುರಿತು ಶೀಘ್ರವಾಗಿ ಕ.ವಿ.ಪ್ರ.ನಿ.ನಿ, ಅಧಿಕಾರಿಗಳೊಂದಿಗೆ ಚರ್ಚಿಸುವುದಾಗಿ ತಿಳಿಸಲಾಯಿತು. |
| 4 | ಶ್ರೀ ಬೂದ್ಯಪ್ಪ, ಬಿ.ಜಿ ಕೊಪ್ಪ | ವಿಫಲಗೊಂಡ 63 ಕೆವಿಎ ಪರಿವರ್ತಕ ಬದಲಾಯಿಸುವ ಬಗ್ಗೆ | ನಿಯಮಾನುಸಾರ ಕ್ರಮ ಕೈಗೊಂಡು ಸದರಿ ಪರಿವರ್ತಕವನ್ನು ಕೂಡಲೇ ಬದಲಾಯಿಸಲು ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. |

ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಮವಿಸಕಂ, ಶಿವಮೊಗ್ಗ ರವರು ಸಭೆಗೆ ಮೇಲ್ಕಂಡ ವಿಷಯಗಳ ಕುರಿತು ಅಗತ್ಯ ಕ್ರಮವಹಿಸುವುದಾಗಿ ತಿಳಿಸಿ, ಸದರಿ ವಿಷಯಗಳ ಕುರಿತು ಅಗತ್ಯ ಕ್ರಮ ವಹಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಸೊರಬ ರವರಿಗೆ ಸೂಚಿಸಿರುತ್ತಾರೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಮವಿಸಕಂ, ಉಪವಿಭಾಗ ಸೊರಬ

ಪ್ರತಿಗಳು:
ಆಧೀಕ್ಷಕ ಇಂಜಿನಿಯರ್(ವಿ), ಮವಿಸಕಂ., ಕಾರ್ಯ ಮತ್ತು ಪಾಲನೆ ವೃತ್ತ, ಶಿವಮೊಗ್ಗ ಇವರಿಗೆ ಗೌರವಪೂರ್ವ ಮಾಹಿತಿಗಾಗಿ ಸಲ್ಲಿಸಿದೆ.
ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮವಿಸಕಂ., ಕಾರ್ಯ ಮತ್ತು ಪಾಲನೆ ವಿಭಾಗ, ಸಾಗರ ಇವರಿಗೆ ಗೌರವಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ.
ಸಹಾಯಕ/ಕಿರಿಯ ಇಂಜಿನಿಯರ್ (ವಿ) ಕಾರ್ಯ ಮತ್ತು ಪಾಲನೆ ಶಾಖೆ, ಮವಿಸಕಂ,ಸೊರಬ, ಉಳವಿ ಹಾಗೂ ಚಂದ್ರಗುತ್ತಿ ರವರಿಗೆ ಮೇಲಿನ ವಿಷಯಗಳ ಕುರಿತು ನಿಯಾಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.
ಕಪ್ರ/ಮುಕ.

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಮೆಸ್ಕಾಂ

MESCOM

ನೋಂದಾಯಿತಕಛೇರಿ
'ಮೆಸ್ಕಾಂ ಭವನ, ಕಾವೂರು ಅಡ್ಡ ರಸ್ತೆ, ಬಿಜೈ.'
ಮಂಗಳೂರು-575004
Corporate Identity Number:
(CIN)U40109 KA 2002 SGC 030425

ಸಹಾಯಕ ಕಾರ್ಯನಿರ್ವಾಹಕಇಂಜಿನಿಯರ್(ವಿ)
ಕಾ ಮತ್ತು ಪಾ. ಉಪವಿಭಾಗ ಶಿಕಾರಿಪುರ.
ದೂರವಾಣಿ ಸಂಖ್ಯೆ: 08187-223240
E-Mail ID:aceshikaripura@rediffmail.com
Web add:www.mesco.in


ನಂ: ಸ.ಕಾ.ನಿ.ಇಂ(ವಿ)/ಶಿಕಾರಿಪುರ/2023-24/ 5636-42, ದಿನಾಂಕ: 29-09-2023

## :: ಜನಸಂಪರ್ಕ ಸಭೆಯ ನಡಾವಳಿ ::

ದಿನಾಂಕ: 21-09-2023 ರಂದು ಬೆಳಗ್ಗೆ 11-00 ಕ್ಕೆ ಶಿಕಾರಿಪುರ ಉಪವಿಭಾಗ ಕಛೇರಿಯಲ್ಲಿ ಗ್ರಾಹಕರ ಕುಂದು ಕೊರತೆಗಳನ್ನು ಬಗೆಹರಿಸಲು ಅಧೀಕ್ಷಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮೆಸ್ಕಾಂ, ಶಿವಮೊಗ್ಗ ರವರ ಅಧ್ಯಕ್ಷತೆಯಲ್ಲಿ **" ಜನಸಂಪರ್ಕ ಸಭೆ "** ಯನ್ನು ಆಯೋಜಿಸಲಾಗಿತ್ತು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿ / ನೌಕರರು :-**

1. ಶ್ರೀ ಶಶಿಧರ್, ಅಧೀಕ್ಷಕ ಇಂಜಿನಿಯರ್(ವಿ), ವೃತ್ತ ಕಛೇರಿ, ಶಿವಮೊಗ್ಗ
2. ಶ್ರೀ ಇಂಧುದರ್. ಆರ್. ಕಾರ್ಯನಿರ್ವಾಹಕ ಇಂಜಿನಿಯರ್(ವಿ)
3. ಶ್ರೀ ಶ್ರೀಧರ್. ಜಿ.ಹೆಚ್. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
4. ಶ್ರೀ ಸಂದೀಪ್. ಜಿ.ಎನ್. ಸಹಾಯಕ ಇಂಜಿನಿಯರ್(ತಾಂತ್ರಿಕ)
5. ಶ್ರೀ ಧನಂಜಯ. ಜೆ, ಸಹಾಯಕ ಲೆಕ್ಕಾಧಿಕಾರಿ (ಪ್ರಭಾರ)
6. ಶ್ರೀ ವಸಂತ.ಎಸ್.ಕೂಲೇರ, ಕಿರಿಯ ಇಂಜಿನಿಯರ್(ವಿ)
7. ಶ್ರೀ ಅಲೋಕ್ ಕುಮಾರ್, ಕಿರಿಯ ಇಂಜಿನಿಯರ್(ವಿ)
8. ಶ್ರೀ ಹರೀಶ್, ಕಿರಿಯ ಇಂಜಿನಿಯರ್(ವಿ)
9. ಶ್ರೀ ವಿಜಯ್. ಎಸ್.ಬಿ. ಕಿರಿಯ ಇಂಜಿನಿಯರ್(ವಿ)
10. ಶ್ರೀ ಕಿರಣ್ ಕುಮಾರ್. ಮೇಲ್ವಿಚಾರಕರು, ಕಾಮಗಾರಿ ಘಟಕ

**ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಂದ ಸ್ವೀಕರಿಸಲಾದ ದೂರುಗಳು :-**

1. ಶ್ರೀ ಮುನಿ, ಶಿಕಾರಿಪುರ, ಮೊಬೈಲ್ ಸಂಖ್ಯೆ: 9999930084 ಎಂಬುವವರು ಸದರಿಯವರ ಸ್ಥಾವರ ಸಂಖ್ಯೆ: 7753 ಕ್ಕೆ ಗೃಹಜ್ಯೋತಿ ಯೋಜನೆಯಡಿ ಬೇಡಿಕೆ ಮಾಡಿರುವ ಬಿಲ್‌ನಲ್ಲಿ ಎಲ್ಲಾ 65 ಯೂನಿಟ್‌ಗಳಿಗೆ ಉಚಿತವಾಗದೇ ಇರುವುದರ ಬಗ್ಗೆ ಕೇಳಿರುತ್ತಾರೆ. ಸದರಿಯವರ ಸ್ಥಾವರಕ್ಕೆ ಸರಾಸರಿ 41 ಯೂನಿಟ್ ನಿಗಧಿಪಡಿಸಿದ್ದು, ಹೆಚ್ಚುವರಿ ಬಿಲ್ ಪಾವತಿ ಮಾಡಬೇಕೆಂದು ತಿಳಿಸಲಾಯಿತು.
2. ಶ್ರೀ ಕರಿಬಸಪ್ಪ, ಭಗನಕಟ್ಟೆ ರವರ ನೀರಾವರಿ ಪಂಪುಸೆಟ್ ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವ ಬಗ್ಗೆ ಕೇಳಿರುತ್ತಾರೆ. ಸದರಿಯವರ ಸ್ಥಾವರಕ್ಕೆ ಲೈನ್ ವರ್ಕ್‌ಗೆ ಮೇ-2023 ರಲ್ಲಿ ಅಂದಾಜು ಪಟ್ಟಿ ತಯಾರಿಸಿ ವಿಭಾಗ ಕಛೇರಿಗೆ ಸಲ್ಲಿಸಲಾಗಿದ್ದು, ಕಾರ್ಯಾದೇಶ ನೀಡಿರುವುದಿಲ್ಲ ಎಂದು ತಿಳಿಸಲಾಯಿತು.
3. ಶ್ರೀ ಹುಚ್ಚಪ್ಪ ಬಿನ್ ಗೋಣೆಪ್ಪ, ಕಂಚಿಗೊಂಡನಕೊಪ್ಪ ರವರ ನೀರಾವರಿ ಪಂಪುಸೆಟ್ ಸ್ಥಾವರಕ್ಕೆ ಮಧ್ಯಂತರ ಕಂಬ ಅಳವಡಿಸಲು ಕೋರಿರುತ್ತಾರೆ. ಸದರಿ ಪ್ರಸ್ತಾವನೆಗೆ ಈಗಾಗಲೆ ಅಂದಾಜು ಪಟ್ಟಿ ಸಂಖ್ಯೆ: 831216/13.03.2023 ನ್ನು ವಿಭಾಗ ಕಛೇರಿಗೆ ಸಲ್ಲಿಸಲಾಗಿದ್ದು, ಕಾರ್ಯಾದೇಶ ನೀಡಿರುವುದಿಲ್ಲ ಎಂದು ತಿಳಿಸಲಾಯಿತು.

ಸಹಿ/-

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾ&ಪಾ ಉಪವಿಭಾಗ, ಮೆಸ್ಕಾಂ, ಶಿಕಾರಿಪುರ

**ಪ್ರತಿಯನ್ನು :-**

1) ಗೌರವಪೂರ್ವಕ ಮಾಹಿತಿಗಾಗಿ, ಅಧೀಕ್ಷಕ ಇಂಜಿನಿಯರ್(ವಿ), ಕಾ&ಪಾ ವೃತ್ತ, ಮೆಸ್ಕಾಂ, ಶಿವಮೊಗ್ಗ
2) ಗೌರವಪೂರ್ವಕ ಮಾಹಿತಿಗಾಗಿ, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ&ಪಾ ವಿಭಾಗ, ಮೆಸ್ಕಾಂ, ಶಿಕಾರಿಪುರ
3) ಸಹಾಯಕ ಲೆಕ್ಕಾಧಿಕಾರಿ, ಕಾ & ಪಾ ಉಪವಿಭಾಗ, ಮೆಸ್ಕಾಂ, ಶಿಕಾರಿಪುರ
4) ಶಾಖಾಧಿಕಾರಿಗಳು /ಪಟ್ಟಣ/ಗ್ರಾಮಾಂತರ/ಹೊಸೂರು/ಈಸೂರು
5) ಕಛೇರಿ ಕಡತ

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಕಛೇರಿ
ಕಾರ್ಯ ಮತ್ತು ಪಾಲನೆ ಉಪ-ವಿಭಾಗ

ಮವಿಸಕಂ ಶಿರಾಳಕೊಪ್ಪ E-Mail ID: aeeshiralakoppa@gmail.com

ನೋಂದಾಯಿತ ಕಛೇರಿ : "ಮೆಸ್ಕಾಂ ಭವನ", ಕಾವೂರು ಅಡ್ಡರಸ್ತೆ, ಬಿಜೈ, ಮಂಗಳೂರು-575 004.

ಕಾರ್ಪೋರೇಟ್ ಐಡೆಂಟಿಟಿ ನಂಬರ್ : (CIN) U40109 KA 2002 SGC 030425. ವೆಬ್ ಸೈಟ್ ವಿಳಾಸ :

ಕ್ರಮಾಂಕ: ಸಕಾನಿಇಂ(ವಿ)/ಸಇಂ(ತಾ)/23-24/ 2190 ದಿನಾಂಕ: 12-09-2023

## "ಜನ ಸಂಪರ್ಕ ಸಭೆಯ ಸಭಾ ನಡಾವಳಿ"

ದಿನಾಂಕ 02.09.2023 ಶನಿವಾರ ದಂದು ಬೆಳಗ್ಗೆ 10:30 ಗಂಟೆಗೆ ಶಿರಾಳಕೊಪ್ಪ ಉಪ-ವಿಭಾಗದ ಕಛೇರಿಯ ಸಭಾಂಗಣದಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ಶಿವಮೊಗ್ಗ ಇವರ ಅದ್ಯಕ್ಷತೆಯಲ್ಲಿ ನಡೆಸಲಾದ ಜನ ಸಂಪರ್ಕ ಸಭೆಯ ನಡಾವಳಿಕೆಗಳು.

**ಹಾಜರಿದ್ದವರು:-**

| ಕ್ರ.ಸಂ | ಹೆಸರು ಶ್ರೀಯುತರು/ಶ್ರೀಮತಿ | ಪದನಾಮ ಮತ್ತು ಕಛೇರಿ |
|---|---|---|
| 1 | ಶ್ರೀ ಶಶಿಧರ್. ಜಿ. ಎಸ್ | ಅಧೀಕ್ಷಕ ಇಂಜಿನಿಯರ್(ವಿ) ಶಿವಮೊಗ್ಗ |
| 2 | ಶ್ರೀ ಪ್ರವೀಣ್.ಎ..ಎಂ | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)(ಪ್ರ) |
| 3 | ಶ್ರೀ ಪ್ರಕಾಶ್ ಹುಚ್ಚಯ್ಯ ಮಠ | ಸಹಾಯಕ ಲೆಕ್ಕಾಧಿಕಾರಿ |
| 4 | ಶ್ರೀ ಭೀಮಪ್ಪ ಹೆಚ್.ವಿ | ಸಹಾಯಕ ಇಂಜಿನಿಯರ್(ವಿ)(ಪ್ರ) |
| 5 | ಶ್ರೀ ಬಾಲರಾಜ ಯಳ್ಳೂರು | ಕಿರಿಯ ಇಂಜಿನಿಯರ್(ವಿ) ತೊಗರ್ಸಿ |
| 6 | ಶ್ರೀ ರವಿರಾಥೋಡ್ | ಕಿರಿಯ ಇಂಜಿನಿಯರ್(ವಿ) ಸುಣ್ಣದಕೊಪ್ಪ |
| 7 | ಶ್ರೀ ಮಂಜುನಾಥ ಬಿ.ಎಸ್ | ಕಿರಿಯ ಇಂಜಿನಿಯರ್(ವಿ) ಗ್ರಾಮಾಂತರ ಶಾಖೆ |
| 8 | ಶ್ರೀ ಸೋಮಪ್ಪ | ಗ್ರಾಹಕರು |
| 9 | ಶ್ರೀ ಬೂದ್ಯಪ್ಪ | ಗ್ರಾಹಕರು |
| 10 | ಶ್ರೀ ಈಶ್ವರಪ್ಪ | ಗ್ರಾಹಕರು |
| 11 | ಶ್ರೀ ವಿರೇಶಪ್ಪ | ಗ್ರಾಹಕರು |
| 12 | ಶ್ರೀ ಶಿವಕುಮಾರ | ಗ್ರಾಹಕರು |
| 13 | ಶ್ರೀ ರುದ್ರಪ್ಪ | ಗ್ರಾಹಕರು |
| 14 | ಶ್ರೀ ಮಾರುತ್ತಿ | ಗ್ರಾಹಕರು |
| 15 | ಶ್ರೀ ರಂಗಪ್ಪ | ಗ್ರಾಹಕರು |
| ಸುಮಾರು 90 ರಿಂದ 100 ಐ.ಪಿ ಬಳಕೆದಾರರು& ರೈತ ಮುಖಂಡರುಗಳು ಹಾಜರಿರುತ್ತಾರೆ | | |

## ಈ ಸಭೆಗೆ ಹಾಜರಾದ ವಿವರಗಳು ಈ ಕೆಳಗಿನಂತಿವೆ.

ಅಧೀಕ್ಷಕ ಇಂಜಿನಿಯರ್(ವಿ), ಮೆಸ್ಕಾಂ ಶಿವಮೊಗ್ಗ ರವರು ಅಧ್ಯಕ್ಷತೆಯನ್ನು ವಹಿಸಿದ್ದು, ಸದರಿಯವರಿಗೆ ಸಭೆಗೆ ಗೌರವಾನ್ವಿತವಾದ ಸ್ವಾಗತವನ್ನು ಎಲ್ಲಾ ಅಧಿಕಾರಿ ಪರವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕೋರಿದರು ಹಾಗೂ ಸಭೆಗೆ ಆಗಮಿಸಿದ ಸಹಾಯಕ ಕಾರ್ಯನಿವಾಹಕ ಇಂಜಿನಿಯರ್(ವಿ),ಸಹಾಯಕ ಇಂಜಿನಿಯರ್(ವಿ)/(ತಾಂ) ಸಹಾಯಕ ಲೆಕ್ಕಾಧಿಕಾರಿಗಳಗೂ/ ಕಿರಿಯ ಇಂಜಿನಿಯರ್(ವಿ)ಗಳಗೆ ಹಾಗೂ ಸಭೆಗೆ ಹಾಜರಿದ ಗ್ರಾಹಕರಿಗೆ ರವರು ಸ್ವಾಗತವನ್ನು ಕೋರುವ ಮೂಲಕ ಸಭೆಯನ್ನು ಆರಂಭಿಸಿದರು.

**ಸಭೆಯಲ್ಲಿ ಗ್ರಾಹಕರು/ಸಾರ್ವಜನಿಕರು ನೀಡಿರುವ ದೂರುಗಳು ಹಾಗೂ ಚರ್ಚಿಸಲಾದ ವಿಷಯಗಳು:**

1) **ಮಳೂರು ಐ.ಪಿ ಬಳಕೆದಾರರು& ರೈತ ಮುಖಂಡರುಗಳು (ಸಮಾರು 60 ರಿಂದ 70)** : ಈ ಮೂಲಕ ಮೆಸ್ಕಾಂ ಅಧಿಕಾರಿಗಳಿಗೆ ತಿಳಿಯ ಪಡಿಸುವುದೇನೆಂದರೆ ಎಫ್:14 ದೇವಿಕೊಪ್ಪ ಫೀಡರ್ ಓವರ್ ಲೋಡ್ ನಿಂದ ಕ... ಸದರಿ ಫೀಡರ್‌ನ ಐ.ಪಿ ಸೆಟ್‌ಗಳಿಗೆ ಲೋ ಒಲ್ಟೇಜ್ ಸಮಸ್ಯೆಇದ್ದು, ಇದರಿಂದ ಐ.ಪಿ ಸೆಟ್‌ಗಳು ಆ... ಆಗುತ್ತಿಲ್ಲ. ಹಾಗೂ ಒಂದು ವಾರ ದಿಂದ ಬೋರ್ ವೆಲ್‌ಗಳಿಗೆ ವಿದ್ಯುತ್ ಸರಬರಾಜು ನೀಡಿರುವುದಿಲ್ಲ. ನಮ್ಮ ಸಮಸ್ಯೆಯನ್ನು ಈ ದಿನವೇ ಬಗೆಹರಿಸಬೇಕು ಇಲ್ಲವಾದಲ್ಲಿ ಉಗ್ರ ಹೋರಾಟ ನಡೆಸುತ್ತೇವೆ ಎಂದು ತಿಳಿಸಿರುತ್ತಾರೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಿರಿಯ ಇಂಜಿನಿಯರ್(ವಿ) ರವರು ಚರ್ಚೆ ಸದರಿ ಎಫ್:14 ದೇವಿಕೊಪ್ಪ ಮಾರ್ಗವು ಓವರ್ ಲೋಡ್ ನಿಂದ ಕೂಡಿದ್ದು ಸದರಿ ಓವರ್ ಲೋಡ್ ಮಾರ್ಗಕ್ಕೆ ಹೊಸದಾಗಿ 26.86 ಲಕ್ಷಗಳ ಮೊತ್ತದ ಅಂದಾಜು ಪಟ್ಟಿಯನ್ನು ತಯಾರಿಸಿ (ಅಂದಾಜು ಪಟ್ಟಿ ಸಂಖ್ಯೆ: 823777/17.02.2023) ಮಂಜೂರಾತಿಗಾಗಿ ಕಾರ್ಪೋರೇಟ್ ಕಛೇರಿ ಮಂಗಳೂರುಗೆ ಸಲ್ಲಿಸಲಾಗಿದ್ದು ಕೂಡಲೇ ಮಂಜೂರಾತಿ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಎಂದು ತಿಳಿಸಲಾಯಿತು.

2) **ದೇವಿಕೊಪ್ಪ ಐ.ಪಿ ಬಳಕೆದಾರರು& ರೈತ ಮುಖಂಡರುಗಳು** (ಸಮಾರು 15 ರಿಂದ 20) : ಎಫ್:14 ದೇವಿಕೊಪ್ಪ ಫೀಡರ್‌ಗೆ ಓವರ್ ಲೋಡ್ ಆಗಿದ್ದು " ವೈ ಆಪರೇಷನ್ ಮಾಡಲು ಯಾವರೀತಿ ಕ್ರಮ ಕೈಗೊಂಡಿರುತ್ತಿರಿ ಎಂದು ಕೇಳಿರಿತ್ತಾರೆ.

ಎಫ್:14 ದೇವಿಕೊಪ್ಪ ಫೀಡರ್‌ಗೆ " ವೈ ಆಪರೇಷನ್"ಮಾಡಲು ಮಾರ್ಗ ಚನೆಯ ಅವಶ್ಯವಿದ್ದು ಕಿರಿಯ ಇಂಜಿನಿಯರ್(ವಿ) ಗ್ರಾಮಾಂತರ ಶಾಖೆ ರವರು ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ. ತದನಂರ **SKP0077** ಯುನಿಕ್ ಐಡಿಯ ಕಾಮಗಾರಿಯ ಅಂದಾಜು ಪಟ್ಟಿಯನ್ನು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಕಛೇರಿಯಿಂದ ಅನುಮೋದನೆ ಪಡೆದು 3-4 ದಿನಗಳೊಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಗ್ರಾಮಸ್ಥರಿಗೆ ತಿಳಿಸಿರುತ್ತಾರೆ.

3) **ಮಳೂರು ಐ.ಪಿ ಬಳಕೆದಾರರು& ರೈತ ಮುಖಂಡರುಗಳು(ಸುಮಾರು 30 ರಿಂದ 40)** : ರೈತರ ಪಂಪ್ ಸೆಟ್‌ಗಳಿಗೆ 24 ಗಂಟೆಗಳ ಕಾಲದಲ್ಲಿ ಒಂದು ದಿನಕ್ಕೆ 8 ಗಂಟೆ ವಿದ್ಯುತ್ ಸಂಪರ್ಕವನ್ನು ಕೊಡುತ್ತಿಲ್ಲ. ಹಾಗೂ ಈಗ ಕೊಡುವ 7 ತಾಸಿನ ವಿದ್ಯುತ್‌ನ್ನು ಸರಿಯಾಗಿ ಕೊಡದೆ 6 ತಾಸು ವಿದ್ಯುತ್ ಸರಬರಾಜು ನೀಡುತ್ತಿದ್ದು, ಆದ್ದರಿಂದ ಐ.ಪಿ ಸ್ಥಾವರಗಳಿಗೆ ವಿದ್ಯುತ್ ಸರಬರಾಜನ್ನು 8 ತಾಸು ನೀಡಬೇಕೆಂದು ಕೋರಿರುತ್ತಾರೆ.

ಐ.ಪಿ ಫೀಡರ್‌ಗಳ ವಿದ್ಯುತನ್ನು ಹಗಲು 4:00 ಗಂಟೆಗಳು ಹಾಗೂ ರಾತ್ರಿ 3:00ಗಂಟೆ ಪಾಳೆಯಲ್ಲಿ ವಿದ್ಯುತ್ ನೀಡಲಾಗುವುದು. ಹಾಗೂ ಹಗಲು ಮಾಗದ ಅಡಚಣೆ ಇದ್ದಲ್ಲಿ ರಾತ್ರಿ ವೇಳೆ ಅದನ್ನು ಸರಿದೂಗಿಸಿ ವಿದ್ಯುತ್ ಸಂಪರ್ಕ ನೀಡಲಾಗುವುದು ಎಂದು ತಿಳಿಸಲಾಯಿತ್ತು. ಮತ್ತು ಸರ್ಕಾರದ ಆದೇಶದಂದೆ ಕೃಷಿ ನೀರಾವರಿ ಪಂಪ್‌ಸೆಟ್‌ಗಳಿಗೆ 7 ತಾಸು ವಿದ್ಯುತ್ ಸರಬರಾಜು ಪೂರೈಸಲು ತಿಳಿಸಿರುತ್ತಾರೆ.

ಬಿಳಕಿ/ದೇವಿಕೊಪ್ಪ/ಮಳೂರು ಗ್ರಾಮಸ್ಥ ಸದರಿ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿ ಕೊಡಲಾಗುವು ಎಂಗು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮತ್ತು ಕಿರಿಯ ಇಂಜಿನಿಯರ್(ವಿ) ರವರು ತಿಳಿಸಿರುತ್ತಾರೆ.

90 ರಿಂದ 100 ಐ.ಪಿ ಬಳಕೆದಾರರು& ರೈತ ಮುಖಂಡರುಗಳು ಪ್ರತಿಭಟನೆಯನ್ನು ವಾಪಸ್ ಪಡೆದು ಹಿಂದಿರುಗಿರುತ್ತಾರೆ.

ಸಭೆಯಲ್ಲಿ ಭಾಗವಹಿಸಿದ ಎಲ್ಲರಿಗೂ ವಂದನೆಯನ್ನು ಸಲ್ಲಿಸಿ ಸಭೆಯನ್ನು ಸಂಜೆ 1:30ಗಂಟೆಗೆ ಮುಕ್ತಾಯಗೊಳಿಸಲಾಯಿತು.

**ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),**
**ಕಾ&ಪಾ ಉಪ-ವಿಭಾಗ ಮೆಸ್ಕಾಂ., ಶಿರಾಳಕೊಪ್ಪ**

**ಪ್ರತಿಗಳು:-**

1) ಗೌರವಪೂರ್ವಕ ಮಾಹಿತಿಗಾಗಿ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ),ಕಾ & ಪಾ ವಿಭಾಗ, ಮೆಸ್ಕಾಂ, ಶಿಕಾರಿಪುರ.
2) ಕಛೇರಿ ಪ್ರತಿ

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನೋಂದಾಯಿತ ಕಛೇರಿ:
'ಮೆಸ್ಕಾಂ ಭವನ' ಕಾವೂರು ಅಡ್ಡ ರಸ್ತೆ, ಬಿಜೈ,
ಮಂಗಳೂರು–575004Corporate Identy
Number:(CIN) U40109 KA 2002 SGC 030425.
Web add: www.mesco.in

ಸಹಾಯಕಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಕಛೇರಿ
ಕಾರ್ಯ ಮತ್ತು ಪಾಲನೆ ಉಪ ವಿಭಾಗ
ಮವಿಸಕಂ ಆನವಟ್ಟಿ–577413
ದೂರವಾಣಿ ಸಂಖ್ಯೆ: 267222
E-MailID:aeeavt@rediffmail.com


ಕ್ರಮಾಂಕ: ಸ.ಕಾ.ನಿ.ಇಂ.(ವಿ)/ಸ.ಇಂ(ತಾಂ)/23–24/ 2065-66　　ದಿನಾಂಕ: 20-9-2023

## : ಜನ ಸಂಪರ್ಕ ಸಭೆಯ ನಡಾವಳಿಗಳು:

**ದಿನಾಂಕ: 11-08-2023 ರಂದು ಬೆಳಗ್ಗೆ 11:00 ಗಂಟೆಗೆ ಆನವಟ್ಟಿ ಉಪ-ವಿಭಾಗ ಕಛೇರಿಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.**

ಸಭೆಗೆಹಾಜರಿದ್ದ ಅಧಿಕಾರಿ/ನೌಕರರು ಗ್ರಾಹಕರು

| ಕ್ರ.ಸಂ | ಹಾಜರಿದ್ದವರು | ಪದನಾಮ ಮತ್ತು ಕಛೇರಿ |
|---|---|---|
| ಅಧಿಕಾರಿಗಳು/ನೌಕರರು | | |
| 01 | ಶ್ರೀ ಶಶಿಧರ ಆರ್ | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ಮೆಸ್ಕಾಂ., ಶಿವಮೊಗ್ಗ |
| 02 | ಶ್ರೀ ಇಂದೂಧರ ಆರ್ | ಮಾನ್ಯ ಕಾರ್ಯಪಾಲಕ ಇಂಜಿನಿಯರ್(ವಿ) ಮೆಸ್ಕಾಂ., ಶಿಕಾರಿಪುರ |
| 03 | ಶ್ರೀ ಆರ್.ರಮೇಶ್ | ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಆನವಟ್ಟಿ. |
| 04 | ಶ್ರೀ ಮಹಲಿಂಗಪ್ಪ ಅಪರಾಜ | ಸಹಾಯಕ ಇಂಜಿನಿಯರ್(ತಾಂ) ಪ್ರಭಾರ ಆನವಟ್ಟಿ/ ಕಿ.ಇಂ(ವಿ)ಜಡೆಶಾಖೆ |
| 05 | ಶ್ರೀ ಭಾಳಪ್ಪ ನಗರಾಳ | ಸಹಾಯಕ ಇಂಜಿನಿಯರ್(ವಿ) (ಪ್ರ)ಆನವಟ್ಟಿ ಶಾಖೆ |
| 06 | ಶ್ರೀ ಲಕ್ಷ್ಮಣ ಹೆಚ್.ಎನ್ | ಕಿರಿಯಇಂಜಿನಿಯರ್(ವಿ) ಕುಪ್ಪಗಡ್ಡೆ ಶಾಖೆ |
| 07 | ಶ್ರೀ ಸಂದೀಪ್ ಜಿ | ಕಿರಿಯಇಂಜಿನಿಯರ್(ವಿ) ಭಾರಂಗಿ ಶಾಖೆ |
| ಗ್ರಾಹಕರು | | |
| 1. | ಶ್ರೀ ಗುಡ್ಡಪ್ಪ | ಕುಬಟೂರು ಗ್ರಾಮ |
| 2. | ಶ್ರೀ ಸರೇಂದ್ರಪ್ಪ | ತೊರವಂದ ಗ್ರಾಮ |
| 3. | ಶ್ರೀ ರವೀಂದ್ರ | ತೊರವಂದ ಗ್ರಾಮ |
| 4. | ಶ್ರೀ ಶಿವಾನಂದ ಗೌಡ | ದ್ವಾರಹಳ್ಳಿ ಗ್ರಾಮ |
| 5. | ಶ್ರೀ ಗುಡ್ಡಪ್ಪ | ದ್ವಾರಹಳ್ಳಿ ಗ್ರಾಮ |
| 6. | ಶ್ರೀ ಮಧು | ದ್ವಾರಹಳ್ಳಿ ಗ್ರಾಮ |
| 7. | ಶ್ರೀ ಮಕ್ಬುಲ್ ಬಾಷಾ | ದ್ವಾರಹಳ್ಳಿ ಗ್ರಾಮ |
| 8. | ಶ್ರೀ ಮಂಜಪ್ಪ | ದ್ವಾರಹಳ್ಳಿ ಗ್ರಾಮ |
| 9. | ಶ್ರೀ ಸೋಮಶೇಖರ್ | ಹಿರೇಕಬ್ಬೂರು ಗ್ರಾಮ |
| 10 | ಶ್ರೀ ಬಸವರಾಜ | ಕಮನವಳ್ಳಿ ಗ್ರಾಮ |
| 11 | ಶ್ರೀ ಪ್ರದೀಪ | ಹೊಸಹಳ್ಳಿ ಗ್ರಾಮ |
| 12 | ಶ್ರೀ ಸತ್ತರ ಸಾಬ್ | ಹೊಸಹಳ್ಳಿ ಗ್ರಾಮ |
| 13 | ಶ್ರೀ ರಾಜು ಹೊಸಹಳ್ಳಿ | ಹೊಸಹಳ್ಳಿ ಗ್ರಾಮ |



Scanned with CamScanner

| | | |
|---|---|---|
| 14 | ಶ್ರೀ ಶ್ರೀಧರ ಹೆಚ್.ಪಿ | ಆನವಟ್ಟಿ ಗ್ರಾಮ |

**ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ಮತ್ತು ಸ್ವೀಕರಿಸಲಾದ ಅವಹಾಲುಗಳು**

| ಕ್ರಮ ಸಂಖ್ಯೆ | ದೂರುದಾರರ ಹೆಸರು/ವಿಳಾಸ | ಅಹವಾಲು | ಕೈ ಗೊಂಡ ಕ್ರಮ |
|---|---|---|---|
| 01 | ಶ್ರೀ ಗುಡ್ಡಪ್ಪ, ಕುಬಟೂರು | ಅಕ್ರಮ ಸಕ್ರಮ ಯೋಜನೆ ಅಡಿಯಲ್ಲಿ ಹಣ ಪಾವತಿಸಿದ್ದು, ಆರ್.ಆರ್ ಸಂಖ್ಯೆ 2018 ನೇ ಸಾಲಿನಲ್ಲಿ ಪಡೆದಿದ್ದು, ಮೂಲಭೂತ ಸೌಕರ್ಯ ಲ್ಪಿಸಿರುವುದಿಲ್ಲ ವೆಂದು ಮನವಿ ಸಲ್ಲಿಸಿದರು. | ಜೇಷ್ಠತಾ ಆಧಾರದ ಮೇಲೆ ಕಾಮಗಾರಿ ನಿರ್ವಹಿಸುವುದಾಗಿ ತಿಳಿಸಿರು |
| 02 | ಶ್ರೀ ಸರೇಂದ್ರಪ್ಪ, ತೊರವಂದ | ಜಿ.ಎಸ್.ಎಮ್ ಯೋಜನೆಅಡಿಯಲ್ಲಿ ಕಾಮಗಾರಿ ನಿರ್ವಹಿಸಿದ್ದು, ಪರಿವರ್ತಕ ಅಳವಡಿಸದೇ ಕಾಮಗಾರಿ ಮುಕ್ತಾಯ ಗೊಳಿಸಿರುವುದಲ್ಲವೆಂದು ಮನವಿ ಸಲ್ಲಿಸಿದರು | ಜೇಷ್ಟತೆ ಆದಾರದ ಮೇಲೆ ಪರಿವರ್ತಕವನ್ನು ನೀಡುವುದಾಗಿ ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ಶಿಕಾರಿಪುರ ರವರು ಸೂಚಿಸಿದರು. |
| 03 | ಶ್ರೀ ರವೀಂದ್ರ, ತೊರವಂದ | | |
| 04 | ಶ್ರೀ ಶಿವಾನಂದ ಗೌಡ, ದ್ವಾರಹಳ್ಳಿ | ದ್ವಾರಹಳ್ಳಿ ಗ್ರಾಮದ ಪರಿವರ್ತಕವು ಪದೇ ಪದೇ ವಿಫಲವಾಗುತ್ತಿದ್ದು, ನೀರಾವರಿ ಸ್ಥಾವರಗಳಿದ್ದು, ವಿಫಲವಾದ ಪರಿವರ್ತಕ ಬದಲಾಯಿಸಲು ಮನವಿ ಸಲ್ಲಿಸಿದರು | ಕೂಡಲೇ ವಿಫಲವಾದ ಪರಿವರ್ತಕವನ್ನು ಬದಲಾಯಿಸಲು ಕ್ರಮ ಕೈ ಗೊಳ್ಳುವಂತೆ ಶಾಖಾಧಿಕಾರಿ ಆನವಟ್ಟಿ ರವರಿಗೆ ಮಾನ್ಯ ಅಧಿಕ್ಷಕ ಇಂಜಿನಿಯರ್(ವಿ) ಮೆಸ್ಕಾಂ., ಶಿವಮೊಗ್ಗ ರವರು ಸೂಚಿಸಿದರು |
| 05 | ಶ್ರೀ ಗುಡ್ಡಪ್ಪ, ದ್ವಾರಹಳ್ಳಿ | | |
| 06 | ಶ್ರೀ ಮಧು, ದ್ವಾರಹಳ್ಳಿ | | |
| 07 | ಶ್ರೀ ಮಕ್ಬುಲ್ ಬಾಷಾ, ದ್ವಾರಹಳ್ಳಿ | | |
| 08 | ಶ್ರೀ ಮಂಜಪ್ಪ, ದ್ವಾರಹಳ್ಳಿ | | |
| 09 | ಶ್ರೀ ಸೋಮಶೇಖರ್, ಹಿರೇಕಬ್ಬೂರ | ಸಾಮಾನ್ಯ ನೀರಾವರಿ ಯೋಜನೆ ಅಡಿಯಲ್ಲಿ ಹಣ ಪಾವತಿಸಿದ್ದು, ಪರಿವರ್ತಕ ಅಳವಡಿಸಿರುವುದಿಲ್ಲವೆಂದು ತಿಳಿಸಿದರು. | ಜೇಷ್ಟತೆ ಆದಾರದ ಮೇಲೆ ಪರಿವರ್ತಕವನ್ನು ನೀಡುವುದಾಗಿ ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ಶಿಕಾರಿಪುರ ರವರು ಸೂಚಿಸಿದರು. |
| 10 | ಶ್ರೀ ಬಸವರಾಜ, ಕಮನವಳ್ಳಿ | | |



Scanned with CamScanner

| | | | |
|---|---|---|---|
| 11 | ಶ್ರೀ ಪ್ರದೀಪ, ಹೊಸಹಳ್ಳಿ | ಹೊಸಹಳ್ಳಿ ಗ್ರಾಮದಲ್ಲಿ ಪದೇ ಪದೇ ವಿದ್ಯುತ್ ವ್ಯತ್ಯಯವಾಗುತ್ತಿರುತ್ತಿದ್ದು, ಜಂಗಲ್ ಕಡಿಸಿರುವುದಿಲ್ಲ ಸಮರ್ಪಕವಾಗಿ ವಿದ್ಯುತ್ ನೀಡಲು ಮನವಿ ಸಲ್ಲಿಸಿದರು | ಕೂಡಲೆ ಮಾನ್ಸೂನ್ ಗ್ಯಾಂಗ್ ಮೆನ್ ರವರಿಂದ ಜಂಗಲ್ ನಿರ್ವಹಣೆ ಮಾಡಿ ಸಮರ್ಪಕ ವಿದ್ಯುತ್ ಪೂರೈಸಲು ಶಾಖಾಧಿಕಾರಿ ಆನವಟ್ಟಿ ರವರಿಗೆ ಮಾನ್ಯ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ಶಿಕಾರಿಪುರ ರವರು ಸೂಚಿಸಿದರು. |
| 12 | ಶ್ರೀ ಸತ್ತರ ಸಾಬ್, ಹೊಸಹಳ್ಳಿ | | |
| 13 | ಶ್ರೀ ರಾಜು ಹೊಸಹಳ್ಳಿ | | |
| 14 | ಶ್ರೀ ಶ್ರೀಧರ ಹೆಚ್.ಪಿ, ಆನವಟ್ಟಿ | ಗೃಹ ಜ್ಯೋತಿಗೆ ಅರ್ಜಿ ಸಲ್ಲಿಸಿದ್ದು, ಇನ್ನೂ ರಿಯಾಯಿತಿ ಆಗಿರುವುದಿಲ್ಲ ಎಂದು ತಿಳಿಸಿದರು. | ಕಂದಾಯ ಶಾಖೆಯ ಸಹಾಯಕ ಲೆಕ್ಕಾಧಿಕಾರಿ ರವರಲ್ಲಿ ತಿಳಿಸಿ ಅರ್ಜಿಯನ್ನು ಪುನಃ ಪರಿಶೀಲಿಸಿ ಸರಿಪಡಿಸಲು ಸೂಚಿಸಿದರು. |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನೆ ಉಪವಿಭಾಗ
ಮವಿಸಕಂ, ಆನವಟ್ಟಿ

ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ (ವಿ)
ಮೆಂ ವಿ ಸರಬರಾಜು ಕಂಪನಿ (ನಿ)
ಆನವಟ್ಟಿ ಉಪ ವಿಭಾಗ

**ಪ್ರತಿಗಳು:**

1. ಗೌರವಪೂರ್ವಕವಾಗಿ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ವೃತ್ತ ಕಛೇರಿ ಮ.ವಿ.ಸ.ಕಂ ಶಿವಮೊಗ್ಗ. ರವರ ದಿವ್ಯ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಗೌರವಪೂರ್ವಕವಾಗಿ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ). ಕಾರ್ಯ ಮತ್ತು ಪಾಲನಾ, ವಿಭಾಗ ಮ.ವಿ.ಸ.ಕಂ ಶಿಕಾರಿಪುರ ರವರ ದಿವ್ಯ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಶಾಖಾಧಿಕಾರಿಗಳು, ಆನವಟ್ಟಿ/ಭಾರಂಗಿ/ಜಡೆ/ಕುಪ್ಪಗಡ್ಡೆ ರವರ ಮಾಹಿತಿಗಾಗಿ.
4. ಕಛೇರಿ ಪ್ರತಿ/ಮು.ಖ



Scanned with CamScanner